೨) ಲಕ್ಕನಕಟ್ಟೆ ಮತ್ತು ನಾರೇಗಲ್‌ನಲ್ಲಿ ಒಂದೊಂದು ೧೧ ಕೆ.ವಿ.ಎ, ೬೦ ಕೆ.ವಿ.ಎ.ಆರ್ ಕೆಪಾಸಿಟರ್‌ಗಳನ್ನು ಹಾಕಲು ಮಂಡಳಿ ಸದ್ಯದಲ್ಲಿ ಕ್ರಮ ಕೈಗೊಳ್ಳಲಾಗಿದೆ. ಲಕ್ಕನಕಟ್ಟೆ ಕೆಲಸ ಪ್ರಗತಿಯಲ್ಲಿದೆ.

೩) ಗಜೇಂದ್ರಗಡದಲ್ಲಿ ಒಂದು ೧೦೦ ಕೆ.ವಿ.ಎ. ಟ್ರಾನ್ಸ್‌ಫಾರ್ಮರನ್ನು ಹಾಕಲಾಗಿದೆ.

೪) ವಿರಡಿ ಲಿಂಕ್ ಲೈನ್‌ಗಳನ್ನು ಹಾಕಲು ಮಂಡಳಿಯು ಕ್ರಮ ಕೈಗೊಂಡಿದೆ. ಒಂದು ೪ ಕಿ. ಮಿ. ಉದ್ದದ ಲೈನನ್ನು ಹೊನ್ನಿಗನೂರಿನಿಂದ ಚಿಕ್ಕಆಲವಂಡಿಗೂ ಇನ್ನೊಂದನ್ನು ಸಂತೆನೂರಿನಿಂದ ಉನಚಗೆರೆಗೂ ಎಳೆಯಲಾಗುತ್ತದೆ.

೫) ವೋಲ್ಟೇಜ್ ಉತ್ತಮ ಪಡಿಸಲು ವಿತರಣೆ ಮಾರ್ಗಗಳ ವೈರ್‌ಗಳ ಗಾತ್ರವನ್ನು ಹೆಚ್ಚಿಸಲು ಕ್ರಮ ಕೈಗೊಂಡಿದೆ.

ಅಸಮರ್ಪಕ ವಿದ್ಯುತ್ ಪೂರೈಕೆಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಸಣ್ಣ ಉದ್ದಿಮೆ ದಾರರಿಗೆ ಹಾನಿಯಾಗಿರುವ ಬಗ್ಗೆ

೪೦೧. ಶ್ರೀ ವಸಂತ ವಿ ಸಾಲ್ಯಾನ (ಕಾಪು).— ಮಾನ್ಯ ವಿದ್ಯುತ್‌ಚಕ್ತಿ ಹಾಗೂ ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೮) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವರ್ಷ ಸಣ್ಣ ಉದ್ದಿಮೆದಾರರಿಗೂ ಹಾಗೂ ರೈತರಿಗೂ ವಿದ್ಯುತ್ತಿನ ಸರಬರಾಜಿನಿಂದಾಗಿ ಹಾನಿಯಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೆ.

೯) ಹಾಗಿದ್ದಲ್ಲಿ ಈ ಹಾನಿಯನ್ನು ಯಾವ ರೀತಿಯಲ್ಲಿ ಸರಿಪಡಿಸಲಾಗುವುದು ?

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

೮) ಬಂದಿದೆ. ಸಣ್ಣ ಬಳಕೆದಾರರ (ಎಲ್. ಟಿ. ಗ್ರಾಹಕರಿಗೆ) ಬಳಕೆ ಮೇಲೆ ಕಡಿತ ವಿಧಿಸ ಲಾಗಿದೆ. ಆದರೆ ಪಂಪು ಸೆಟ್ಟುಗಳ ಬಳಕೆಯ ಮೇಲೆ ಯಾವ ಕಡಿತವನ್ನು ವಿಧಿಸಿಲ್ಲ. ಕಡಿತ ವಿಧಿಸಿರುವೆಡೆ ಸ್ವಲ್ಪ ಅನಾನುಕೂಲವಾಗಿರುವುದು ಸಹಜ.

೯) ಮಳೆಗಾಲದಲ್ಲಿ ಮಳೆ ವಿಫಲವಾದ್ದರಿಂದ ನೈಸರ್ಗಿಕ ವಿಪತ್ತಿನಿಂದಾಗಿ ತೀವ್ರ ವಿದ್ಯುತ್ ಕೊರತೆ ಉಂಟಾಗಿದೆ. ಆದರೂ ಸಹ ತೀವ್ರ ಕೊರತೆಯನ್ನು ಕಡಿಮೆ ಮಾಡಲು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

೧) ವಿದ್ಯುತ್ ಕೊರತೆಯನ್ನು ತುಂಬಲು ನೆರೆ ರಾಜ್ಯಗಳಿಂದ ವಿದ್ಯುತ್ತನ್ನು ಆಮದು ಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ.

೨) ನಮ್ಮಲ್ಲಿ ಕೈಗೊಂಡಿರುವ ವಿದ್ಯುತ್ ಯೋಜನೆಗಳನ್ನು ಆದ್ಯತೆ ಮೇರೆಗೆ ಪೂರೈಸಲು ಕ್ರಮ ಕೈಗೊಳ್ಳಲಾಗುತ್ತಿದೆ.

೩) ಕರ್ನಾಟಕ ವಿದ್ಯುತ್ ನಿಗಮದವರಿಂದ ಕಾಳೀ ನೀರು ಹಂತ ತೆಗೆದುಕೊಳ್ಳಲು ಪ್ರಯತ್ನಿಸಲಾಗಿದೆ.

೪) ರಾಯಚೂರು ಶಾಖೋತ್ಪನ್ನದ ಕೇಂದ್ರದಲ್ಲಿ ವಿದ್ಯುದುತ್ಪಾದನೆಯನ್ನು ಹೆಚ್ಚಿಸಲು ತೀವ್ರ ಕ್ರಮ ಕೈಗೊಳ್ಳಲಾಗುತ್ತಿದೆ.

೫) ಸಣ್ಣ ಜಲವಿದ್ಯುತ್ ಘಟಕಗಳನ್ನು ಖಾಸಗಿಯವರು ತೆಗೆದುಕೊಳ್ಳಲು ಒಪ್ಪಿಗೆ ಕೊಡಲಾಗಿದೆ.

೬) ಡೀಸಲ್ ಜನರೇಟರುಗಳಿಂದ ಖಾಸಗಿಯವರು ಉತ್ಪಾದನೆಯನ್ನು ಹೆಚ್ಚಿಸಲು ರಿಯಾಯಿತಿಗಳನ್ನು ಕೊಡಲಾಗಿದೆ.